## ಪ್ರಾರ್ಥನಾ ಮನವಿ

1.ಮಕ್ಕಳನ್ನು ಗುರಿಮಾಡಿ ಅಪಹರಿಸುವಂತದ್ದೂ, ಅವರನ್ನು ಅನೇಕ ಕಾರಣಗಳಿಗಾಗಿ ಮಾರಾಟಮಾಡುವಂತದ್ದೂ ಆದ ಈ ಇಂತಹ ದುಷ್ಕೃತ್ಯಗಳು ಎಲ್ಲವೂ ದೇಶವನ್ನು ಬಿಟ್ಟು ನಾಶಗೊಳ್ಳುವಂತೆ ಪ್ರಾರ್ಥಿಸಿರಿ.

2.ಇಂತಹ ದುಷ್ಟವ್ಯಾಪಾರಗಳಲ್ಲಿ ಒಳಪಡುವ ರಾಜಕೀಯ ವ್ಯಕ್ತಿಗಳ, ಹಣಬಲವಿರುವ, ನಕಲಿ ಮತಾಸ್ಥರ ಮುಖಗಳು ಹರಿದು ಹೋಗುವಂತೆಯೂ, ಇಂತವರು ಸಿಕ್ಕಿಬೀಳುವಂತೆಯೂ, ದಂಡನೆಗೊಳಪಡುವಂತೆಯೂ ಪ್ರಾರ್ಥಿಸಿರಿ.

3.ಮಕ್ಕಳ ಭಾವೆಗಳನ್ನು ಪ್ರೇರೇಪಿಸಿ, ಅವರನ್ನು ಪಾಪದಲ್ಲಿ ಬೀಳಿಸಿ, ಅವರ ದೇಹದ ಅಂಗಗಳಿಗಾಗಿ ಅವರನ್ನು ಅಪಹರಿಸುವದಕ್ಕಾಗಿ ಹೊರಡುವ ದುಷ್ಟಜನರು ವೈದ್ಯಕೀಯ ವಿಭಾಗದಲ್ಲಿ ಎದ್ದೇಳದಂತೆ ಪ್ರಾರ್ಥಿಸಿರಿ. ಇಂತವರು ಇದ್ದರೆ ಅವರು ಸಿಕ್ಕಿಬಿದ್ದು ದಂಡನೆಗೊಳಪಡುವಂತೆಯೂ ಪ್ರಾರ್ಥಿಸಿರಿ.

4.ಚಿಕ್ಕ ಮಕ್ಕಳ ಮೇಲೆ ಬಿಚ್ಚಿಬಿಡಲ್ಪಡುವಂತ ವ್ಯಭಿಚಾರ ಕೃತ್ಯಗಳು ಕಟ್ಟಲ್ಪಡುವಂತೆಯೂ, ಇಂತಹ ದುಷ್ಟ ಕ್ರಿಯೇಗಳನ್ನು ನಡೆಸುವಂತವರು ಬಹು ಕಠಿಣವಾಗಿ ದಂಡಿಸಲ್ಪಡುವಂತಹ ಕಾನೂನುಗಳು ದೇಶದಲ್ಲಿ ಜಾರಿಗೆ ಬರುವಂತೆ ಪ್ರಾರ್ಥಿಸಿರಿ.

5.ಕಡೆಯ ಕಾಲದಲ್ಲಿ ಚಿಕ್ಕ ಮಕ್ಕಳ ಮೇಲೆ ದೇವರು ಇಟ್ಟಿರುವ ಚಿತ್ತವೂ, ಅವರಿಗೆ ದೇವರು ಇಟ್ಟಿರುವ ವಾಗ್ದಾನವೂ ನೆರವೇರದಂತೆ ತಡೆಮಾಡಿ ಹೋರಾಡುತ್ತಿರುವ ಎಲ್ಲಾ ವಿಧವಾದ ದುರಾತ್ಮಗಳು ಕಟ್ಟಲ್ಪಡುವಂತೆಯೂ ಅವುಗಳು ದೇಶವನ್ನು ಬಿಟ್ಟು ಹಟ್ಟಲ್ಪಡುವಂತೆಯೂ ಪ್ರಾರ್ಥಿಸಿರಿ.

## ಪ್ರಾರ್ಥನೆ ಮಾಡಲು ಇಚ್ಚಿಸುತ್ತೀರಾ?

ಇಚಿತಹ ಪ್ರವಾದನೆಗಳಿಗೆ ಪ್ರಾರ್ಥಿಸಲು ಇಚ್ಚಿಸುತ್ತೀರಾ? ಹಾಗಾದರೆ ಈ ಕೆಳಕಂಡ ನಮ್ಮ ದೂರವಾಣಿ ಸಂಖ್ಯೆಗಳಿಗೆ ಯಾವುದಾದರೂ ಒಂದಕ್ಕೆ ಮಿಸ್ಡ್ ಕಾಲ್ ಕೊಡಿರಿ. ನಮ್ಮ ಸೇವಕರು ನಿಮ್ಮೊಂದಿಗೆ ಸಂಪರ್ಕಗೊಂಡು ನೀವು ಪ್ರಾರ್ಥಿಸುವದಕ್ಕಾಗಿ ಪ್ರವಾದನೆಗಳನ್ನು ನಮ್ಮಿಂದ ಹೊಂದಿಕೊಳ್ಳಲು ನಿಮಗೆ ಸಹಾಯ ಮಾಡುವರು.

0092/KAN/2019/0003

**prophetic propagators mission**

| MADURAI | CHENNAI | BANGALORE |
|---|---|---|
| 9488987770 | 9600001844 | 8095772333 |

propagators@vojmedia.com



### ದೇವರು ನುಡಿದ ಮಾತು

# ಮಕ್ಕಳಿಗಾಗಿ..

### ಮಕ್ಕಳ ಬಗ್ಗೆ ದೇವರು ನುಡಿದ ಮಾತು:

ಈ ವರ್ಷದಲ್ಲಿ ದೇವರು ಮುಂಬರುವ ದಿನಗಳಲ್ಲಿ ಮಕ್ಕಳ ನಡುವೆ ಉಂಟಾಗುವ ಕೆಲವು ಕೇಡುಕುಗಳ ಬಗ್ಗೆ ಮುನ್ಸೂಚನೆಯಾಗಿ ಎಚ್ಚರಿಸಿ ತಿಳಿಸಿದಂತ ಮಾತುಗಳನ್ನು ತಿಳಿದುಕೊಂಡು ಮಕ್ಕಳ ರಕ್ಷಣೆಗಾಗಿ ಪ್ರಾರ್ಥಿಸುವದಕ್ಕಾಗಿಯೇ ಈ ಕರಪತ್ರವು ಪ್ರಕಟಿಸಲ್ಪಟ್ಟಿದೆ. ದೇವರು ನುಡಿದ ಮಾತುಗಳನ್ನು ಸಂಕ್ಷಿಪ್ತವಾಗಿ ಓದಿ ತಿಳಿದುಕೊಂಡು ಅದಕ್ಕಾಗಿ ಪ್ರಾರ್ಥಿಸಿರಿ.

ಈ ಪ್ರವಾದನ ನುಡಿಯೂ 02.01.2019 ರಲ್ಲಿ ದೇವರು ಸಹೋ. ವಿನ್ಸೆಂಟ್ ಸೆಲ್ವಕುಮಾರ್ ಅವರಿಗೆ ಪ್ರಕಟಿಸಿ ತಿಳಿಸಿದಂತದ್ದು;

## ದೇವರು ಪ್ರಕಟಿಸಿದ ಪ್ರವಾದನೆಗಳು

ಮಕ್ಕಳನ್ನೂ, ಬಾಲಕರನ್ನೂ ಗುರಿವಾಡಿ ಅವರನ್ನು ನಾಶಮಾಡುವುದಕ್ಕೂ, ಅವರ ಜೀವನವನ್ನು ಕೆಡಿಸಿ ಹಾಕುವಂತ ಕೇಡುಗಳು ದೇಶಗಳ ಮೇಲೆ ಬರುತ್ತದೆ. ಮಕ್ಕಳು, ಬಾಲಕರು ವ್ಯಾಪಾರ ವಸ್ತುಗಳಾಗಿ ಮಾರ್ಪಡುವರು. ಇವರನ್ನು ಗುರಿಮಾಡಿ ಮಾಡಲ್ಪಡುವಂತ ಮಾರಾಟವು ದೇಶದ ನಡುವೆ ಬಹು ತೀವ್ರವಾಗಿ ಹರಡುತ್ತದೆ. ಬಹು ಮಕ್ಕಳು ಅಪಹರಿಸಲ್ಪಟ್ಟು, ಇಚ್ಚೆಗಳ ನೋಟವಸ್ತುವಾಗಿಯೂ, ಇಚ್ಚೆಗಳ ವಸ್ತುಗಳಾಗಿ ಮಾರಾಟವಾಗುವರು. ಇವರನ್ನು ಗುರಿಮಾಡಿಕೊಂಡು ಮಾಡುವ ವ್ಯಾಪಾರವು ಪರದೆಯ ಹಿಂದೆ ಬಹು ಹೆಸರುವಾಸಿಯಾಗಿರುತ್ತದೆ. ಇದರ ಪರದೆ ಹರಿಯುವಾಗ, ಇದರ ಹಿಂದೆ ನೀವು ನಂಬಲು ಸಾಧ್ಯವಾಗದ ಅಧಿಕಾರಿಗಳು, ಮುಖ್ಯಸ್ಥರುಗಳು ಇರುವದನ್ನು ಕಾಣುವಿರಿ. ಮತ್ತೂ ರಾಜಕೀಯ ಸಂಪತ್ತು ಹೊಂದಿರುವ ಅಧಿಕಾರಿಗಳಲ್ಲಿ ಕೆಲವರು, ವ್ಯಾಪಾರದಲ್ಲಿ ಬಲವಂತರಾಗಿರುವ ಕೆಲವರು, ಮತಾಸಕ್ತಿಯುಳ್ಳ ಕೆಲವರು ಇದರ ಹಿಂದೆ ಕಾರ್ಯ ನಿರ್ವಹಿಸುತ್ತಿರುವಂತದ್ದನ್ನು ಕಾಣುವಿರಿ. ಸಾಮಾನ್ಯ ಸ್ಥಳಗಳಲ್ಲೂ, ಶಾಲೆಗಳಲ್ಲೂ, ವಾಣಿಜ್ಯವ್ಯಾಪಾರದ ಸ್ಥಳಗಳಲ್ಲೂ ಇವರು ನುಗ್ಗಿ ಮಕ್ಕಳನ್ನು ಕದಿಯುವರು.

ಮತ್ತು ಇವರು ಮನೆಗಳೊಳಗೆ ನುಗ್ಗಿ ಮಕ್ಕಳನ್ನು ಅಪ-ಹರಿಸುವಂತದ್ದೂ, ಮಕ್ಕಳೊಂದಿಗೆ ಪಳಗಿ ಅವರನ್ನು ತಮಗೆ ವಶಪಡಿಸುವಂತ ಕೃತ್ಯಗಳು ದೇಶದಲ್ಲಿ ಹೆಚ್ಚುವಂತದ್ದನ್ನು ನೋಡುವಿರಿ. ಮತ್ತೂ ಜಾಲತಾಣದ ಮೂಲಕ, ಸಮಾಜಿಕ ಜಾಲತಾಣಗಳಲ್ಲಿಯೂ ಮಕ್ಕಳಿಗೆ ಬಲೆ ಬೀಸುವ ಭಯಂಕರಗಳು ಬರುತ್ತಿದೆ. ಮನಸೆಳೆಯುವ ಕಾರ್ಯಕ್ರಮಗಳು, ಮಧ್ಯಪಾನದ ಮತ್ತಿನ ಆಟಗಳಲ್ಲೂ, ಬೆಲೆಬಾಳುವ ಉಡುಗೊರೆಗಳಿಂದಲೂ ಮಕ್ಕಳನ್ನು ತಮಗೆ ವಶಮಾಡಿಕೊಂಡು ಅವರನ್ನು ಅಪಹರಿಸುವರು. ವ್ಯಾಪಾರ ಮಾಡುವ ದುಷ್ಟ ಜನರು ಅನೇಕರು ಎದ್ದಿದ್ದಾರೆ. ಅವರ ಕೃತ್ಯಗಳು ಮುಂಬರುವ ದಿನಗಳಲ್ಲಿ ಬಹು ಬೇಗನೆ ಹೆಚ್ಚಿಕೊಳ್ಳುವಂತದ್ದನ್ನು ನೋಡುವಿರಿ. ವೈದ್ಯಕೀಯ ವಿಭಾಗದಲ್ಲಿ ಕೆಲವು ದುಷ್ಟಜನರು ಎದ್ದು, ಮಕ್ಕಳನ್ನು ಗುರಿಮಾಡಿ ಅವರ ಮೇಲೆ ಕೇಡನ್ನು ಬಿಚ್ಚಿಬಿಡುವರು. ಮಕ್ಕಳ ಭಾವನೆಗಳಲ್ಲಿ ಕೇಡನ್ನು ಪ್ರೇರೇಪಿಸಿ, ಅವರ ದೇಹದ ಅಂಗಗಳಿಗಾಗಿ ಅವರನ್ನು ಅಪಹರಿಸಿ, ಮಕ್ಕಳನ್ನು ಕೇಡಿಗೂ, ವ್ಯಾಪಾರಕ್ಕೂ, ಕೊಲೆಮಾಡುವದಕ್ಕೂ ದುಷ್ಟಜನರು ವೈದ್ಯಕೀಯ ವಿಭಾಗದಲ್ಲಿ ಹೆಚ್ಚುವರು. ಮತ್ತೂ ಮಕ್ಕಳನಿಟ್ಟು ಮಕ್ಕಳನ್ನೂ, ಹಿರಿಯರನ್ನಿಟ್ಟು ಮಕ್ಕಳನ್ನೂ ಕೇಡಿಗೆ ಅಪಹರಿಸುವ ಜನ ದೇಶದಲ್ಲಿ ಬಹು ತೀವ್ರವಾಗಿ ಎದ್ದೇಳುವರು. ದೇಶದ ಮಕ್ಕಳು ನೂರರಷ್ಟು, ಸಾವಿರದಷ್ಟು ಕಣ್ಣಿಗೆ ಕಾಣದೇ ಹೋಗುವರು. ಆದ್ಯಾತ್ಮಿಕ ಸ್ಥಳಗಳಲ್ಲೂ, ಆಲಯಗಳಲ್ಲೂ, ದೇಶದ ಕತ್ತಲೇಯಲ್ಲೂ, ಹಗಳಲ್ಲೂ ಈ ಕೇಡು ಬಹಳವಾಗಿ ಹರಡುತ್ತದೆ.

ಮಕ್ಕಳ ನಡುವೆ ಇವರಿಂದ ಮರಣವೂ, ಮಕ್ಕಳ ನಡುವೆ ಇವರ ನಿಮಿತ ವ್ಯಭಿಚಾರ ಕೃತ್ಯಗಳು ಅತಿ ಬೇಗನೆ ಮೇಲೆಳುತ್ತದೆ. ಮಕ್ಕಳನಿಟ್ಟು ಹೀಗೆ ಪರದೆಯ ಹಿಂದೆ ನಡೆಯುವಂತಹ ಇಂತಹ ವ್ಯಾಪಾರದಿಂದ, ಹೆಚ್ಚು ಸಂಪತ್ತನ್ನುಂಟುಮಾಡುವಂತದ್ದೂ, ಕನಿಷ್ಟಾವಧಿಯಲ್ಲಿ ಶ್ರೀಮಂತರನ್ನಾಗಿ ಮಾಡುವಂತದ್ದೂ ಆಗಿರುತ್ತದೆ. ಇದರ ನಿಮಿತ ಅನೇಕರು ಪರದೆಯ ಹಿಂದೆ ಇಂತಹ ಕೇಡಿಗೆ ಸಹಾದಯ ಅಸ್ತ ನೀಡುವರು. ಮತ್ತೂ, ಚಿಕ್ಕವರನ್ನೂ, ಬಡವರನ್ನೂ ಗುರಿಮಾಡಿಕೊಂಡು ಶಾಲೆಗಳ ಸುತ್ತಲೂ ಈ ಕೆಡುಕರು ಹೊಂಚಿರುತ್ತಾರೆ. ಅನೇಕರನ್ನು ಮದ್ಯಕ್ಕೆ ವಶಪಡಿಸಿ, ಅವರನ್ನು ಇಂತಹ ಅಭ್ಯಾಸಗಳಿಗೆ ಒಳಪಡಿಸಿ ಅವರನ್ನು ವಶಪಡಿಸಿಕೊಳ್ಳಲು ಬಹು ತೀವ್ರವಾಗಿ ಈ ಕೆಡುಕರ ಕಾಲುಗಳು ಅಲೆದಾಡುತ್ತದೆ. ಹೆಣ್ಣು ಮಕ್ಕಳಿಗೆ ಮಾತ್ರವಲ್ಲ, ಗಂಡು ಮಕ್ಕಳ ಮೇಲೂ ದೇಶದಲ್ಲಿ ಕೇಡೂ, ವ್ಯಭಿಚಾರಕ್ಕೆ ಸಂಬಂಧಪಟ್ಟ ಕೃತ್ಯಗಳು, ಮೇಲೆದ್ದು ಬೆಳಕಿಗೆ ಬರುವಂತದ್ದನ್ನು ನೋಡುವಿರಿ. ಇದು ಸೈತಾನನಿಂದ ಮಕ್ಕಳ ಮೇಲೆ ಬಿಚ್ಚಿಬಿಡಲ್ಪಟ್ಟಿರುವ ಕೇಡಾಗಿದೆ. ಮುಂಬರುವ ಉಜ್ಜೀವನ ಕಾಲದಲ್ಲಿ ದೇವರ ಕರವು ಮಕ್ಕಳನ್ನು ಹೇರಳವಾಗಿ ಮುಟ್ಟುವದಕ್ಕೂ, ಅವರನ್ನಿಟ್ಟು ಮಹಾಕಾರ್ಯಗಳನ್ನು ಮಾಡುವದಕ್ಕೂ ಚಿತ್ತವಿರುವದರಿಂದ ಕೇಡುಗಳು ಹಾರಿಬರುವಂತೆ ಮಕ್ಕಳ ಮೇಲೆ ಬಿಚ್ಚಿಬಿಡಲು ಸೈತಾನನು ತಂತ್ರಮಾಡಿದ್ದಾನೆ.